ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 352 (251) |
| ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18.07.2024 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಯವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದ ಹಾಗೂ ಸರ್ಕಾರದ ಅಧೀನದಲ್ಲಿರುವ ನಿಗಮ ಮಂಡಳಿಗಳು ಹಾಗೂ ಸಹಕಾರಿ ಸಂಸ್ಥೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು; ಗುತ್ತಿಗೆ ಆಧಾರದ ನೇಮಕಾತಿಯಲ್ಲಿ ಮೀಸಲಾತಿಯನ್ನು ನೀಡಲಾಗುತ್ತಿದೆಯೇ; ಯಾವ ಮೀಸಲಾತಿ ನಿಯಮಗಳಡಿ ಇದನ್ನು ನಿರ್ವಹಿಸುತ್ತಿದ್ದಾರೆ; (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ರಾಜ್ಯ ಸರ್ಕಾರದಡಿ ಗುತ್ತಿಗೆ / ಹೊರಗುತ್ತಿಗೆಯಡಿ ಸುಮಾರು 96,844 ನೌಕರರು ಕಾರ್ಯನಿರ್ವಹಿಸುತ್ತಿರುತ್ತಾರೆ. (ಇಲಾಖಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.)<br><br>ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 6 ಸೇನೆನಿ 2024, ದಿನಾಂಕ 24.05.2024ರಲ್ಲಿ ರಾಜ್ಯ ಸರ್ಕಾರದ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿಯನ್ನು ಪಾಲಿಸುವಂತೆ ಸೂಚನೆಗಳನ್ನು ನೀಡಲಾಗಿದೆ, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮೀಸಲಾತಿ ಅನುಸರಿಸುವಂತೆ ಸಿಆಸು ಇಲಾಖೆ (ಸೇವಾ ನಿಯಮಗಳು)ಯಿಂದ ಯಾವುದೇ ಮಾರ್ಗಸೂಚನೆಗಳನ್ನು ಹೊರಡಿಸಿರುವುದಿಲ್ಲ. |
| ಆ) | ಗುತ್ತಿಗೆ ಆಧಾರದ ನೇಮಕಾತಿಗೆ ಯಾವ ನಿಯಮಾವಳಿಗಳನ್ನು ಅನುಸರಿಸಲಾಗುತ್ತಿದೆ; ಅರ್ಹ ಅಭ್ಯರ್ಥಿಗಳು ಹಾಗೂ ಕೆಳಸಮುದಾಯಗಳು ವಿಶೇಷವಾಗಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳು ಇತರೆ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶದಿಂದ ವಂಚನೆಯಾಗದಂತೆ ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ; | ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮ, 1977ರಲ್ಲಿ ಗುತ್ತಿಗೆ ಆಧಾರದ ನೇಮಕಾತಿಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಕಲ್ಪಿಸಲಾಗಿದ್ದು, ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಮೀಸಲಾತಿ ಅನುಸರಿಸುವಂತೆ ಮಾರ್ಗಸೂಚನೆಗಳನ್ನು ಹೊರಡಿಸಿರುವುದಿಲ್ಲ. |
| ಇ) | ಸರ್ಕಾರದ ಇತ್ತೀಚಿನ ಸುತ್ತೋಲೆಯ ಪ್ರಕಾರ ಮೀಸಲಾತಿಯನ್ನು ಕಡೆಗಣಿಸಿ ಯಾರಿಗೆ ಬೇಕಾದರೂ ಹುದ್ದೆ ನೀಡಬಹುದಾದಂತಹ ಅವಕಾಶವಿದ್ದು, ರೋಸ್ಟರ್ ಬಿಂದು ಗುರುತಿಸಲು ಪ್ರತಿಯೊಂದು ಹುದ್ದೆಗೂ ಸಾಧ್ಯವೇ ರೋಸ್ಟರ್ ಬಿಂದುಗಳು | ರಾಜ್ಯ ಸರ್ಕಾರದ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿಯನ್ನು ಪಾಲಿಸುವಂತೆ ಸೂಚನೆಗಳನ್ನು ನೀಡಲಾಗಿರುವ ಸುತ್ತೋಲೆ ಸಂಖ್ಯೆ:ಸಿಆಸುಇ 6 ಸೇನೆನಿ 2024, ದಿನಾಂಕ:20.05.2024ರಲ್ಲಿ, ಯಾವುದೇ ಇಲಾಖೆಯಲ್ಲಿ ಕನಿಷ್ಠ 20 ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿಯನ್ನು ಜಾರಿಗೊಳಿಸತಕ್ಕದ್ದೆಂದು ತಿಳಿಸಲಾಗಿತ್ತು, ನಂತರದಲ್ಲಿ ಸಮ ಸಂಖ್ಯೆಯ ದಿನಾಂಕ:03.04.2025 ರ ಸರ್ಕಾರದ ಸುತ್ತೋಲೆಯಲ್ಲಿ ಮೇಲಿನ ಅಂಶವನ್ನು |

| | | |
|---|---|---|
| | ಶತಾಂಶ ಬಿಂದುಗಳಾಗಿದ್ದು (100) ಹೀಗೆ 20 ಉದ್ಯೋಗಗಳು ಎಂದು ಕನಿಷ್ಠಗೊಳಿಸಿ ಹಾಗೂ ಆಯ್ಕೆ ಮಾಡುವ ಸಂದರ್ಭದಲ್ಲಿ 20ಕ್ಕಿಂತ ಕಡಿಮೆ ಅಂದರೆ 19-18-17 ಹೀಗೆ, ನೇಮಕಾತಿ ಮಾಡುವಾಗ ರೋಸ್ಟರ್ ಬಿಂದುಗಳನ್ನು ಪಾಲಿಸಲು ಕಷ್ಟಸಾಧ್ಯವಾಗುವುದಿಲ್ಲವೇ: (ಸಂಪೂರ್ಣ ಮಾಹಿತಿ ನೀಡುವುದು) | ಪರಿಷ್ಕರಿಸಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ಅಧಿನಿಯಮ, 2024ರ ಸೆಕ್ಷನ್ 4ರ ಸಬ್ ಸೆಕ್ಷನ್ (5) ರಾಜ್ಯ ಸಿವಿಲ್ ಸೇವೆಗಳ ವೃಂದದಲ್ಲಿನ ಅಥವಾ ಸರ್ಕಾರಿ ವಲಯದ ಸಂಸ್ಥೆಗಳಲ್ಲಿನ ಯಾವುದೇ ಹುದ್ದೆಗೆ ನೇರ ನೇಮಕಾತಿ ಕೋಟಾದ ಎದುರು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡುವಾಗ ಸರ್ಕಾರದಿಂದ ಮಾನ್ಯತೆ ಪಡೆದ ಮಾನವ ಶಕ್ತಿ ಪೂರೈಕೆ ಏಜೆನ್ಸಿಯು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ನಿಯಮಿಸಬಹುದಾದ ಅಂಥ ವ್ಯಾಪ್ತಿ ಮತ್ತು ವಿಧಾನದಲ್ಲಿ ಸಾಕಷ್ಟು ಪ್ರಾತಿನಿಧ್ಯ ನೀಡಲಾಗಿದೆ ಎಂದು ಖಚಿತಪಡಿಸಿಕೊಳ್ಳತಕ್ಕದೆಂದು ತಿಳಿಸಲಾಗಿದ್ದು, ಅದರಂತೆ ಕ್ರಮವಹಿಸುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ. |
| ಈ) | ಒಂದು ವೇಳೆ ರೋಸ್ಟರ್ ಬಿಂದುಗಳನ್ನು ನಿಗದಿತ ಅನುಪಾತದಂತೆ ಅಳವಡಿಸದ ಪಕ್ಷದಲ್ಲಿ ಅರ್ಹರಿಗೆ ಅನ್ಯಾಯವಾಗುವುದಿಲ್ಲವೇ: ಇದನ್ನು ತಡೆಯಲು ಸರ್ಕಾರದ ಸುತ್ತೋಲೆಯಲ್ಲಿ ಮಾರ್ಪಡಿಸಿ ಅರ್ಹರನ್ನು ಉದ್ಯೋಗಾವಕಾಶ ವಂಚಿತರಾಗದಂತೆ ಕ್ರಮವಹಿಸಲು ಸರ್ಕಾರ ಚಿಂತಿಸುವುದೇ? | |

**ಸಂಖ್ಯೆ: ಸಿಆಸುಇ 217 ಸೇನೆನಿ 2024**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ-1

## ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ / ಹೊರಗುತ್ತಿಗೆ ಸಿಬ್ಬಂದಿಗಳ ವಿವರ

| ಕ್ರ.ಸಂ. | ಇಲಾಖೆಗಳು | ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ |
|---|---|---|
| 1. | ಕೃಷಿ | 15824 |
| 2. | ಪಶುಸಂಗೋಪನೆ | 15376 |
| 3. | ಹಿಂದುಳಿದ ವರ್ಗಗಳ ಕಲ್ಯಾಣ | 11424 |
| 4. | ಸಹಕಾರ | 6511 |
| 5. | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ | 5753 |
| 6. | ಸಿಆಸುಇ (ಇ-ಆಡಳಿತ) | 5686 |
| 7. | ಪರಿಸರ ಮತ್ತು ಜೀವಿಶಾಸ್ತ್ರ | 3579 |
| 8. | ಇಂಧನ | 3403 |
| 9. | ಆರ್ಥಿಕ | 3314 |
| 10. | ಮೀನುಗಾರಿಕೆ | 2794 |
| 11. | ಆಹಾರ ಮತ್ತು ನಾಗರಿಕ ಸರಬರಾಜು | 2759 |
| 12. | ಅರಣ್ಯ | 2744 |
| 13. | ಕೈಮಗ್ಗ ಮತ್ತು ಜವಳಿ | 2724 |
| 14. | ಆರೋಗ್ಯ | 2286 |
| 15. | ಉನ್ನತ ಶಿಕ್ಷಣ | 1603 |
| 16. | ಒಳಾಡಳಿತ | 1570 |
| 17. | ತೋಟಗಾರಿಕೆ | 1514 |
| 18. | ವಸತಿ | 1305 |
| 19. | ವಾರ್ತೆ | 545 |
| 20. | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 492 |
| 21. | ಮೂಲಭೂತ ಸೌಕರ್ಯ | 467 |
| 22. | ಕನ್ನಡ ಮತ್ತು ಸಂಸ್ಕೃತಿ | 465 |
| 23. | ಕಾರ್ಮಿಕ | 397 |
| 24. | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ | 369 |
| 25. | ಭಾರಿ ನೀರಾವರಿ | 337 |
| 26. | ಭಾರಿ ಮತ್ತು ಮಧ್ಯಮ ಕೈಗಾರಿಕೆ | 314 |
| 27. | ವೈದ್ಯಕೀಯ ಶಿಕ್ಷಣ | 305 |
| 28. | ಗಣಿ | 303 |
| 29. | ಸಣ್ಣ ನೀರಾವರಿ | 294 |
| 30. | ಅಲ್ಪಸಂಖ್ಯಾತರ ಕಲ್ಯಾಣ | 238 |
| 31. | ಸಂಸದೀಯ ವ್ಯವಹಾರಗಳು | 221 |
| 32. | ಯೋಜನೆ, ಸಾಂಖ್ಯಿಕ ವಿಜ್ಞಾನ ಮತ್ತು ತಂತ್ರಜ್ಞಾನ | 208 |
| 33. | ಲೋಕೋಪಯೋಗಿ | 202 |

| ಕ್ರ.ಸಂ. | ಇಲಾಖೆಗಳು | ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ |
|---|---|---|
| 34. | ಕಂದಾಯ | 171 |
| 35. | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ | 169 |
| 36. | ಪರಿಶಿಷ್ಟ ಜಾತಿಗಳ ಕಲ್ಯಾಣ | 154 |
| 37. | ಪರಿಶಿಷ್ಟ ಪಂಗಡಗಳ ಕಲ್ಯಾಣ | 143 |
| 38. | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ | 143 |
| 39. | ರೇಷ್ಮೆ | 115 |
| 40. | ಕೌಶಲ್ಯ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 107 |
| 41. | ಸಣ್ಣ ಕೈಗಾರಿಕೆ | 101 |
| 42. | ಪ್ರವಾಸೋದ್ಯಮ | 88 |
| 43. | ಸಾರಿಗೆ | 88 |
| 44. | ನಗರಾಭಿವೃದ್ಧಿ | 70 |
| 45. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 57 |
| 46. | ಯುವಜನ ಸೇವೆಗಳು | 28 |
| ಒಟ್ಟು | | **96844** |